# ಯಾರು ಒಲಿದರೇನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 483
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 394
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 135. Here, the song starts from "Aru munidarEnu, namaginnAru olidarEnu". Also, the song almost matches with the lyrics given here but slightly different. These lyrics are not considered here.
4. **Note:** Lyrics given here are as per Ref. 1. The wordings given in Ref. 2 are same as in Ref. 1. This song is available with few variations in two volumes of Prof. S.K. Ramachandra Rao and these references are given above.
5. **Note:** This song is not available in the books of Shri Betageri Krishna Sharma and Shri Bengeri Huchha Rayaru.
6. **Note:** Singer has followed these lyrics.

ರಾಗ: ಆನಂದ ಭೈರವಿ ತಾಳ: ಆದಿ

ಯಾರು ಒಲಿದರೇನು ನಮಗಿನ್ನಾರು ಮುನಿದರೇನು || ಪ ||
ಕ್ಷೀರಸಾಗರ ಶಾಯಿಯಾದವನ ಸೇರಿದಂಥ ಹರಿದಾಸರಿಗೆ || ಅಪ ||

ಊರನಾಳುವ ದೊರೆಗಳು ನಮ್ಮನು ದೂರ ಅಟ್ಟಿದರೇನು
ಘೋರಾರಣ್ಯದಿ ತಿರುಗುವ ಮೃಗಗಳು ಅಡ್ಡಗಟ್ಟಿದರೇನು
ಮಾರಿ ಹಿಂಡು ಮತ್ತೆ ಮುಸುಕಿನ ದಂಡು ಮೈಗೆ ಮುತ್ತಿದರೇನು
ವಾರಿಜನಾಭನ ವಸುದೇವಸುತನ ಸಾರುವಂಥ ಹರಿದಾಸರಿಗೆ || ೧ ||

ಪಡೆದ ತಾಯಿ ತಂದೆ ನಮ್ಮೊಳು ಅಹಿತ ಮಾಡಿದರೇನು
ಮಡದಿ ಮಕ್ಕಳು ಮನೆಯ ನೆಂಟರು ಮುನಿಸುಗುಟ್ಟಿದರೇನು
ಒಡನಾಡುವ ಗೆಳೆಯರು ನಮ್ಮೊಳಗೆ ವೈರವ ಬೆಳೆಸಿದರೇನು

ಕಡಲಶಯನ ಕರುಣಾನಿಧಿ ನಾಮವು ಒಡಲೊಳಗಿಹ ಹರಿದಾಸರಿಗೆ || ೨ ||

ಕಾನನದೊಳ್ಹರಿದಾಡುವ ಸರ್ಪವು ಕಾಲಿಗೆ ಸುತ್ತಿದರೇನು
ಜೇನಿನಂದದಿ ಕೀಟ ಕ್ರಿಮಿಗಳು ಚರ್ಮಕೆ ಮುತ್ತಿದರೇನು
ಭಾನುನಂದನ ಬುಧ ಮಂಗಳರಾ ಬಲವು ತಪ್ಪಿದರೇನು
ದೀನನಾಥ ಶ್ರೀ ಪುರಂದರ ವಿಠಲನ ಧ್ಯಾನವುಳ್ಳ ಹರಿದಾಸರಿಗೆ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿದಾಸನಾದವನು ಸಮಾನದ ನಿಂದೆ ಸ್ತುತಿಗಳಿಗೆ ಲಕ್ಷ್ಯ ಮಾಡುವವನಲ್ಲ. ಗೃಹ ತ್ಯಾಗ, ಸೋದರರ ಕಪಟ, ಗೆಳೆಯರ ವೈರ, ರಾಜ್ಯತ್ಯಾಗ, ವನವಾಸ, ಗ್ರಹಚಾರ ಇವು ಯಾವುದಕ್ಕೂ ಹೆದರದೆ ಸಟೆದು ನಿಲ್ಲಬಲ್ಲ ಶಕ್ತಿ ಆ ಜೀವಕ್ಕಿದೆ.

ಎಲ್ಲಾ ಧರ್ಮ ಸಾಧನೆಗಳಲ್ಲಿಯೂ ಶ್ರೀ ಹರಿ ನಾಮ ಸ್ಮರಣೆಯೆ ಶ್ರೇಷ್ಠ ಸಾಧನವೆಂದು ದಾಸರು ಸಾರಿದ್ದಾರೆ. ನಾಮಸ್ಮರಣೆಯಿಂದ ಜಾತಿ, ಪಂಥ, ಕುಲ, ಪಾಪ, ಮುಂತಾದವು ಯಾವ ಭೇದಗಳೂ ಉಳಿಯವೆಂಬುದು ದಾಸರ ಅಭಿಪ್ರಾಯ.

**ಚೇತನಾತ್ಮಕ** = ಚಿನ್ಮಯ, ಚಿತ್ ಸ್ವರೂಪ

**ವೆಗ್ಗಳ** = ಅತಿಶಯ

**ಪರಿಪರಿ ವಿಧವೆಲ್ಲ** – ಪ್ರಪಂಚದ ಹಲವು ಪ್ರಸಕ್ತಿಗಳೆಲ್ಲ.

**ನೆರೆನಂಬಿದವರಿಗೆ**– ಚೆನ್ನಾಗಿ (ಅನನ್ಯನೆಂದು) ಶ್ರದ್ಧೆಯಿಟ್ಟವರಿಗೆ.

**ಜಡನಾದರೇನು** – ಮೂರ್ಖನಾದರೇನು.

**ಮಾರಿಹಿಂಡು** – ಕ್ಷುದ್ರದೇವತೆಗಳು, ಉಪದ್ರವವನ್ನು ರೋಗಗಳನ್ನು ಒದಗಿಸುವಂಥವು.

**ಮುಸುಕಿನ ದಂಡು** – ಕರಿಮೋರೆಯ, ಆಕಳ ಬಾಲದ ಕಪಿಗಳ ಗುಂಪು (ಗೋಲಾಂಗೂಲ); ಮುಸುಕೆಂದರೆ ಮೋಹ, ಅಜ್ಞಾನ, ಭ್ರಮೆ ಎಂದೂ ಆಗುತ್ತದೆ.

**ಭಾನುನಂದನ** – ಶನಿ, ಶನೈಶ್ಚರ.

**Classification:** Keerthane
**Ankita:** purandara vittala
**Location:** NA
**Category:** Bhakti, virakti, vairagya
**Sub-Category:** Olume, sittu, Vishnu, Krishna, ooru, arasa, kaadu, tayi, tande, patni, makkalu, bandhu, mitra, shatru, karuna, uraga, jenu, Dhyana, vairagya,
**Pravachana:** NA
**Explanation:** NA